ಇ) *ಸ್ವಂತ ಕಟ್ಟಡ ಇಲ್ಲದಿರುವ ಅಂಗನವಾಡಿಗಳ ಸಂಖ್ಯೆ ಎಷ್ಟು?*

ಈ) *ಈ ಅಂಗನವಾಡಿಗಳಿಗೆ ಸ್ವಂತ ಕಟ್ಟಡ ಎಂದಿನಿಂದ ಒದಗಿಸಲಾಗುವುದು?*

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು) :

ಅ) ಚಿಕ್ಕಮಗಳೂರು ಜಿಲ್ಲೆಯ ಬೀರೂರು ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಂಗನವಾಡಿ ಕೇಂದ್ರಗಳು ಒಟ್ಟು 165.

ಆ) ಸ್ವಂತ ಕಟ್ಟಡ ಹೊಂದಿರುವ ಅಂಗನವಾಡಿಗಳ ಸಂಖ್ಯೆ 64

ಇ) ಸ್ವಂತ ಕಟ್ಟಡ ಇಲ್ಲದಿರುವ ಅಂಗನವಾಡಿಗಳ ಸಂಖ್ಯೆ 101.

ಈ) ಹಂತ ಹಂತವಾಗಿ ಸ್ವಂತ ಕಟ್ಟಡಗಳನ್ನು ಒದಗಿಸಲಾಗುವುದು

ಹಣ್ಣಿನ ಹಾಗೂ ಹೂವಿನ ಗಿಡ ಮಾರಾಟ

510 - ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಳಗಾಂವ್ ಜಿಲ್ಲೆಯಲ್ಲಿ ತೋಟಗಾರಿಕೆ ಇಲಾಖೆಯವರು ಕಳೆದ ವರ್ಷ ಹಾಗೂ ಈ ವರ್ಷ ತಯಾರಿಸಿರುವ ಹಣ್ಣಿನ ಗಿಡಗಳ ಸಂಖ್ಯೆ ಎಷ್ಟು ಹಾಗೂ ಯಾವ ಫಾರಂನಲ್ಲಿ ತಯಾರಿಸಿರುವರು?*

ಆ) *ಬೆಳಗಾಂವ್ ಜಿಲ್ಲೆಯಲ್ಲಿ ತೋಟಗಾರಿಕೆ ಇಲಾಖೆಯವರು ಯೋಗ್ಯ ರೀತಿಯಲ್ಲಿ ಹಣ್ಣಿನ ಹಾಗೂ ಹೂವಿನ ಗಿಡಗಳನ್ನು ಪೂರೈಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಹಾಗಿದ್ದಲ್ಲಿ ಯೋಗ್ಯ ದರದಲ್ಲಿ ಜನರಿಗೆ ಪೂರೈಸಲು ಕ್ರಮ ಕೈಗೊಳ್ಳಲಾಗುವುದೇ?*

ಈ) *ಹೂವಿನ ಗಿಡಗಳನ್ನು ಬೇರೆ ರಾಜ್ಯಗಳಿಂದ ತಂದು ರಾಜ್ಯದ ಬೆಳಗಾಂವ್ ಜಿಲ್ಲೆಯಲ್ಲಿ ಪೂರೈಕೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಉ) *ಹಾಗಿದ್ದಲ್ಲಿ ಜನರಿಗೆ ಯೋಗ್ಯ ದರದಲ್ಲಿ ಹೂವಿನ ಗಿಡಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದೇ?*

ಶ್ರೀ ಅಲ್ಲಂ ವೀರಭದ್ರಪ್ಪ (ತೋಟಗಾರಿಕೆ ರಾಜ್ಯ ಸಚಿವರು) :

ಅ) ವಿವರವನ್ನು ಅನುಬಂಧ 1ರಲ್ಲಿ ನಮೂದಿಸಿದೆ.

ಆ) ಬಂದಿರುವುದಿಲ್ಲ.

ಇ) ಬೆಳಗಾಂವ್ ಜಿಲ್ಲೆಯಲ್ಲಿ ರೈತರಿಗೆ ಅವಶ್ಯಕವಿರುವ ತೋಟದ : ಹಣ್ಣಿನ ಗಿಡಗಳನ್ನು ಇಲಾಖಾ ಕ್ಷೇತ್ರ : ಸಸ್ಯಗಾರಗಳಲ್ಲಿ ಉತ್ಪಾದಿಸಿ ಇಲಾಖೆಯು ನಿಗಧಿ ಪಡಿಸಿದ ದರಗಳಲ್ಲಿ ಪೂರೈಸಲಾಗುತ್ತಿದೆ.

ಈ) ಬಂದಿರುವುದಿಲ್ಲ, ತೋಟಗಾರಿಕೆ ಇಲಾಖೆಯಲ್ಲಿ ಇಲಾಖಾ ಕ್ಷೇತ್ರ : ಸಸ್ಯಾಗಾರಗಳಲ್ಲಿ ಉತ್ಪಾದಿಸಿದ ಹೂವಿನ : ಅಲಂಕಾರಿಕ ಗಿಡಗಳನ್ನು ಮಾತ್ರ ಮಾರಾಟ ಮಾಡಲಾಗುತ್ತಿದೆ. ಬೇರೆ ರಾಜ್ಯಗಳಿಂದ ಈ ಗಿಡಗಳನ್ನು ತಂದು ಪೂರೈಸುವ ಕ್ರಮವನ್ನು ಇಲಾಖೆಯು ವಹಿಸಿರುವುದಿಲ್ಲ.

ಉ) ಹೂವಿನ : ಅಲಂಕಾರಿಕ ಗಿಡಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ಇಲಾಖೆಯ ಕ್ಷೇತ್ರ : ಸಸ್ಯಗಾರಗಳಲ್ಲಿ ಉತ್ಪಾದಿಸಿ ವಿತರಣೆ ಮಾಡಲಾಗುತ್ತಿದ್ದು, ಇಲಾಖೆಯ ಅಂಗ ಸಂಸ್ಥೆಗಳಾದ ಮೈಸೂರು ಉದ್ಯಾನ ಕಲಾ ಸಂಘ ಮತ್ತು ಜಿಲ್ಲಾ ತೋಟಗಾರಿಕೆ ಉತ್ಪನ್ನ ಬೆಳೆಗಾರರ ಮಾರಾಟ ಮತ್ತು ಸಂಸ್ಕರಣ ಸಹಕಾರ ಸಂಘದ ಮೂಲಕವಾಗಿಯೂ ಸದರಿ ಗಿಡಗಳನ್ನು ಆಸಕ್ತರಿಗೆ ಒದಗಿಸಲು ಕ್ರಮ ಕೈಗೊಂಡಿರುತ್ತದೆ.

ಅನುಬಂಧ - 1

1998-99ನೇ ಸಾಲಿನಲ್ಲಿ ಬೆಳಗಾಂವ್ ಜಿಲ್ಲೆಯಲ್ಲಿ ಇಲಾಖಾ ಕ್ಷೇತ್ರಗಳಲ್ಲಿ ತಯಾರಿಸಿರುವ ಹಣ್ಣಿನ ಗಿಡಗಳ ವಿವರ

ಕ್ರ.ಸಂ.	ಕ್ಷೇತ್ರದ ಹೆಸರು	ಮಾವು ಕಸಿ	ಚಿಕ್ಕು ಕಸಿ	ಪೇರಳ ಕಸಿ
1.	ಹಿಡಕಲ್	40000	5000	2000
2.	ಶೇಡಗಳಿ ಖಾನಾಪುರ	40000	-	-
3.	ಧೂಪದಾಳ	30000	6000	1000
4.	ಉಗರಗೋಳ ಸೌದತ್ತಿ	-	6000	2000
5.	ಯಕ್ಕೇರಿ, ಸೌದತ್ತಿ	-	6000	-
6.	ಕಿತ್ತೂರು	-	6000	-
7.	ಚಿಕ್ಕೋಡಿ	-	1000	-
8.	ಗುಂಡೇವಾಡಿ, ಅಥಣಿ	850	1600	-
9.	ಲಕ್ಷ್ಮೀಟೇಕ್, ಬೆಳಗಾವಿ	2600	1800	-
10.	ಮೇಕಳಿ, ರಾಯಭಾಗ್	1900	1400	
11.	ಮುಸೊಳಿ ಮತ್ತು ಕುರುವಿನಕೊಪ್ಪ, ಸೌದತ್ತಿ. ತಾ	1800	2200	-
	ಒಟ್ಟು	**1,17,150**	**37,000**	**5000**

1999-2000 ನೇ ಸಾಲಿನಲ್ಲಿ ಬೆಳಗಾಂವ್ ಜಿಲ್ಲೆಯಲ್ಲಿ ಇಲಾಖಾ ಕ್ಷೇತ್ರಗಳಲ್ಲಿ ತಯಾರಿಸಿರುವ ಹಣ್ಣಿನ ವಿವರ

ಕ್ರ.ಸಂ.	ಕ್ಷೇತ್ರದ ಹೆಸರು	ಮಾವು ಕಸಿ	ಚಿಕ್ಕು ಕಸಿ	ಪೇರಳ ಕಸಿ
1.	ಹಿಡಕಲ್‌ಕ್ಷೇತ್ರ	35000	4100	2000
2.	ಶೇಡಗಳಿ ಕ್ಷೇತ್ರ	35000	4400	-
3.	ಧೂಪದಾಳ	20000	4400	2000
4.	ಕಿತ್ತೂರು	-	4400	-
5.	ಉಗರಗೋಳ	-	4400	1000
6.	ಗುಂಡೇವಾಡಿ	1200	500	-
7.	ಲಕ್ಷ್ಮೀಟೇಕ್	12000	-	-
8.	ಮೇಕಳಿ	2000	-	-
9.	ಮಸೋಳಿ ಮತ್ತು ಕುರುವಿನ ಕೊಪ್ಪ	1500	1000	1500
	ಒಟ್ಟು	**1,06,700**	**23,200**	**6500**

ಕಿತ್ತೂರಿನಿಂದ ಸವದತ್ತಿಗೆ ಹೊಸ ಬಸ್ಸು ಪ್ರಾರಂಭ

511- ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಬೈಲಹೊಂಗಲ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೈಲಹೊಂಗಲ ತಾಲ್ಲೂಕಿನ ಕಿತ್ತೂರಿನಿಂದ ಸವದತ್ತಿಗೆ ವಯಾ ದೊಡವಾಡ ಕರಿಕಟ್ಟಿ ಮಾರ್ಗವಾಗಿ ಇರುವ ಅಂತರ ಎಷ್ಟು?*

ಆ) *ಕಿತ್ತೂರಿನಿಂದ ಸವದತ್ತಿಗೆ ವಯಾ ಬೆಳವಡಿ ಪಟ್ಟಿಹಾಳ, ಕೆ.ಟಿ.ಖೋದಾನಪೂರ ಮಾರ್ಗವಾಗಿ ಇರುವ ಅಂತರ ಎಷ್ಟು ಕಿ.ಮೀ.?*

ಇ) *ಕಿತ್ತೂರಿನಿಂದ ಸವದತ್ತಿಗೆ ವಯಾ ಬೆಳವಡಿ ಬುಡರಕಟ್ಟಿ ತುರಕರಶಿಗಿಹಳ್ಳಿ ಮಾರ್ಗವಾಗಿ ಇರುವ ಅಂತರ ಎಷ್ಟು ಕಿ.ಮೀ?*

ಈ) *ಹಾಗಿದ್ದಲ್ಲಿ, ಕಿತ್ತೂರಿನಿಂದ ಸವದತ್ತಿಗೆ ವಯಾ ದೊಡವಾಡ ಕರಿಕಟ್ಟಿ, ಮಾರ್ಗವಾಗಿ ವಾಹನಗಳನ್ನು ಓಡಿಸಿದರೆ 10 ಕಿ.ಮೀ. ಅಂತರ ಕಡಿಮೆ ಆಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಉ) *ಹಾಗಿದ್ದಲ್ಲಿ ಕಿತ್ತೂರಿನಿಂದ ಸವದತ್ತಿಗೆ ವಯಾ ದೊಡವಾಡ ಕರಿಕಟ್ಟಿ ಮಾರ್ಗವಾಗಿ ಹೊಸ ವಾಹನವನ್ನು ಓಡಿಸಲು ಕ್ರಮ ಕೈಗೊಳ್ಳಲಾಗುವುದೇ?*